

## ಜನರಲ್ಲಿ ವಿಶ್ವಾಸ ಮೂಡಿಸಿ

ಕಸ್ತೂರಿ ರಂಗನ್ ವರದಿ ಜಾರಿಗೊಳಿಸುವ ಮುನ್ನ ಪಶ್ಚಿಮ ಘಟ್ಟದ ತಪ್ಪಲು ಪ್ರದೇಶದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ವರದಿಯಲ್ಲಿ ಏನೇನು ಅಂಶಗಳಿವೆ ಎಂಬುದನ್ನು ಕನ್ನಡದಲ್ಲಿ ಜನರಿಗೆ ಅರ್ಥ ಮಾಡಿಸಬೇಕು. ಕಾಫಿ ಬೆಳೆಗಾರರ ಸಂಘ, ಮಲೆನಾಡು ಮಂಡಳಿ, ಗ್ರಾಮಪಂಚಾಯಿತಿಗಳಲ್ಲಿ ಈ ಕುರಿತು ಚರ್ಚೆ ನಡೆಸಿ, ವಿಷಯವನ್ನು ವಿಶದವಾಗಿ ತಿಳಿಸಬೇಕು. ಡಾ. ಕಸ್ತೂರಿ ರಂಗನ್ ಅವರು ಸ್ಯಾಟಲೈಟ್ ಮಾಹಿತಿ ಆಧರಿಸಿ ಸಮೀಕ್ಷೆ ನಡೆಸಿದ್ದಾರೆ ಎಂಬ ಆರೋಪವು, ಅನೇಕ ಸಂದರ್ಭಗಳಲ್ಲಿ ಹೌದು ಎನಿಸುತ್ತಿದೆ. ಯಾಕೆಂದರೆ, ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿಗಳು, ಗೋಮಾಳಗಳು, ದೇವಸ್ಥಾನಗಳು ಸೇರಿವೆ. ಇದೆಲ್ಲ ಹೇಗೆ ಸಾಧ್ಯ ?

**-ಎಚ್.ಟಿ. ಮೋಹನ್**
ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ



### 'ವರದಿ'ಯಿಂದಷ್ಟೇ ಸಂರಕ್ಷಣೆ ಎಂಬ ಹಟವೇಕೆ?

ಮಾಧವ ಗಾಡ್ಗೀಳ್ ವರದಿಯಲ್ಲೇ ಆಗಲೀ, ಕಸ್ತೂರಿ ರಂಗನ್ ವರದಿಯಲ್ಲೇ ಆಗಲಿ ನಿಜವಾಗಿಯೂ ಏನಿದೆ ಎಂಬುದನ್ನು ಗ್ರಾಮಸ್ಥರಿಗೆ (ಸ್ಥಳೀಯರಿಗೆ) ತಿಳಿಸುವ ಪ್ರಯತ್ನವನ್ನು ಸರ್ಕಾರ ಮಾಡಿಲ್ಲ. ಇಂಗ್ಲಿಷ್‌ನಲ್ಲಿರುವ ವರದಿಯು ಕನ್ನಡಕ್ಕೆ ತರ್ಜುಮೆಯಾಗದೇ ಇರುವುದರಿಂದ ಊಹಾಪೋಹಗಳನ್ನು ಆಧರಿಸಿ ಜನ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ವರದಿ ಜಾರಿಯಾದರೆ – ಸಂಜೆಗೇ ಬೀದಿದೀಪಗಳನ್ನು ನಂದಿಸಬೇಕಂತೆ, ಕಾಡಿನ ಅಂಚಿನಲ್ಲಿರುವ ಗ್ರಾಮಗಳಿಗೆ ರಸ್ತೆಗಳನ್ನು ಮಾಡುವಂತಿಲ್ಲವಂತೆ, ಮನೆಗಳಿಗೆ ಕೇವಲ ಹಸಿರು ಬಣ್ಣ ಬಳಿಯಬೇಕಂತೆ ಎಂಬೆಲ್ಲ ಅಂತೆಕಂತೆಗಳೇ ಸುದ್ದಿಯಾಗಿವೆಯೇ ಹೊರತು, ವಾಸ್ತವವನ್ನು ತಿಳಿಸಿಕೊಡುವ ಪ್ರಯತ್ನಗಳನ್ನು ಸರ್ಕಾರ ಮಾಡಿಲ್ಲ. ಅಷ್ಟೇ ಅಲ್ಲ, ಕಸ್ತೂರಿ ರಂಗನ್ ವರದಿಯ ಶಿಫಾರಸುಗಳು ಪಶ್ಚಿಮ ಘಟ್ಟವನ್ನು ಸಂರಕ್ಷಿಸುವಷ್ಟರ ಮಟ್ಟಿಗೆ ಬಿಗಿಯಾಗಿಲ್ಲ. ಅಂದಮೇಲೆ, ನಿಜವಾಗಿಯೂ ಪಶ್ಚಿಮ ಘಟ್ಟದ ಸಂರಕ್ಷಣೆಯಾಗಬೇಕಾದರೆ 'ಈ ವರದಿ' ಜಾರಿಗೊಳಿಸುವ ಮಾದರಿಯನ್ನಷ್ಟೇ ಅನುಸರಿಸಬೇಕೇ? ಈ ವರದಿಯು ಕುರಿತಾಗಿರುವ ಗೊಂದಲವು ಜನರಲ್ಲಿ 'ಪರಿಸರವುಳಿಸಬೇಕು' ಎಂಬ ಆಶಯವನ್ನು ಪ್ರೇರೇಪಿಸುವ ಬದಲಾಗಿ, ಪಶ್ಚಿಮ ಘಟ್ಟಗಳ ಬಗ್ಗೆ ಗೊಂದಲಗಳ ಬೀಜ ಬಿತ್ತುತ್ತಿದೆಯೇ? ಪಶ್ಚಿಮ ಘಟ್ಟಗಳ ಮಹತ್ವವನ್ನು ತಿಳಿಸುವ, ಅವುಗಳನ್ನು ಕಾಪಾಡುವ ನಿಟ್ಟಿನಲ್ಲಿ ನಮ್ಮಲ್ಲಿ ಈಗಾಗಲೇ ಇರುವ ಪರಿಸರ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ಅಥವಾ ಹೊಸ ಕಾನೂನುಗಳನ್ನು ರಚನೆ ಮಾಡುವುದರ ಮೂಲಕ ನಮ್ಮ ಹಸಿರು ಸಂಪತ್ತನ್ನು ಉಳಿಸಿಕೊಳ್ಳಬಹುದಲ್ಲ? ಜನರಲ್ಲಿ ಗೊಂದಲ ಉಂಟುಮಾಡುವುದರ ಬದಲಿಗೆ, ಘಟ್ಟದ ಉಳಿವು ಎಷ್ಟು ಮುಖ್ಯವೆಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡುವ ಕೆಲಸ ಮಾಡಬಹುದಲ್ಲವೇ? ಪರಿಸರಪ್ರಿಯರ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು?

ಪರಿಸರಪ್ರಿಯ ವಾದ ವಾಸ್ತವಕ್ಕೆ ಹತ್ತಿರವಾದುದು. ಇರುವ ಕಾನೂನುಗಳನ್ನೇ ಕಟ್ಟುನಿಟ್ಟಾಗಿ ಜಾರಿಯಾಗಿಸಿದ್ದರೆ ಗಾಡ್ಗೀಳ ವರದಿಯಾಗಲೀ, ಕಸ್ತೂರಿರಂಗನ್ ವರದಿಯಾಗಲೀ ರೂಪುಗೊಳ್ಳುವ ಅಗತ್ಯವೇ ಇರಲಿಲ್ಲ.

### ಸಂಪತ್ತೇ ಬಲುಭಾರವೇ?

'ಪರಿಸರವನ್ನು ಉಳಿಸಬೇಕು, ಅದು ಇಡೀ ಮನುಕುಲದ ಸಂಪತ್ತು' ಎಂಬುದನ್ನು ಒಪ್ಪುವುದು ಆದರ್ಶವೂ ಹೌದು, ಸುಂದರವಾದ ವಿಚಾರವೂ ಹೌದು. ಆದರೆ ವಾಸ್ತವವೇ ಬೇರೆಯಾಗಿರುತ್ತದೆ. ಪ್ರಸ್ತುತ ಜೀವನಶೈಲಿಯು ನಗರ ಮತ್ತು



ಕಸ್ತೂರಿ ರಂಗನ್ ಸಮಿತಿ ವರದಿ ಬಂದರೆ ಕಾಫಿ ಬೆಳೆಯುವುದಕ್ಕೂ ತಡೆಯಾಗಬಹುದು. ರಸ್ತೆ ಮಾಡಬೇಡಿ, ಮರಗಸಿ ಮಾಡಬೇಡಿ ಎಂಬೆಲ್ಲ ನಿಷೇಧಗಳು ಬರಬಹುದು. ಹಾಗಾಗಿ ವರದಿಯನ್ನು ವಿರೋಧಿಸಿ ಹೆತ್ತೂರು, ಹೊಂಗಡಹಳ್ಳ, ಒಳಳಹಳ್ಳಿ ಮುಂತಾದ ಹಲವು ಗ್ರಾಮ ಪಂಚಾಯಿತಿಗಳಲ್ಲಿ ವಿರೋಧ ವ್ಯಕ್ತವಾಗಿತ್ತು. ನಾವು ಹಿಂದಕ್ಕೆ ಹೋಗುವುದಕ್ಕೆ ಆಗುವುದಿಲ್ಲವಲ್ಲ.

**-ಉಜ್ಮಾ ರಿಜ್ವಿ ಸುದರ್ಶನ್**
ಜಿಲ್ಲಾಪಂಚಾಯಿತಿ ಸದಸ್ಯೆ, ಹಾಸನ